# ಮತ್ತೆ ಕಾಜೋಲ್ ಸಿನಿ ಸಮಯ



ಸಂಸಾರದಲ್ಲೇ ಕಳೆದುಹೋಗಿರುವ ನಟಿಯರು ತೆರೆಮೇಲೆ ಕಾಣಿಸಿಕೊಳ್ಳುವ ದಿನ ಬಂದಾಗ ಸಹಜವಾಗಿಯೇ ಒಂದು ಪ್ರಶ್ನೆ ಏಳುತ್ತದೆ. ಅವರು ಚಿತ್ರೀಕರಣಕ್ಕೆ ಎಷ್ಟು ಹೊತ್ತು ನೀಡಬಲ್ಲರು. ಇತ್ತೀಚೆಗೆ ಈ ಪ್ರಶ್ನೆಯನ್ನು ಎದುರಿಸಿದ್ದು ನಟ ಅಜಯ್ ದೇವಗನ್. ಕಾಜೋಲ್ ಅಭಿನಯಿಸಿರುವ 'ಮಾ' ಹಿಂದಿ ಸಿನಿಮಾದ ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಅವರಿಗೆ ಇಂತಹ ಪ್ರಶ್ನೆ ಎದುರಾಯಿತು.

ದಿನಕ್ಕೆ ಎಂಟು ತಾಸಿನ ಶಿಫ್ಟ್‌ನಲ್ಲಿ ಕೆಲಸ ಮಾಡಲು ಅಷ್ಟೇ ಸಾಧ್ಯ ಎಂದು ಮಹಿಳೆಯರು ಷರತ್ತು ಹಾಕಿದರೆ ಅದಕ್ಕೆ ಒಪ್ಪುವ ಸ್ಥಿತಿ ಇದೆಯಾ ಎನ್ನುವುದು ಪ್ರಶ್ನೆ. ದೀಪಿಕಾ ಪಡುಕೋಣೆ ಇದೇ ಷರತ್ತನ್ನು ಹಾಕಿದ್ದು, ಅದಕ್ಕೆ ಸಂದೀಪ್ ಒಪ್ಪಿಲ್ಲ ಎನ್ನುವ ಅಭಿಪ್ರಾಯ ಬಾಲಿವುಡ್‌ನಲ್ಲಿ ಹರಿದಾಡುತ್ತಿದೆ. ಈ ನಿಟ್ಟಿನಲ್ಲಿ ಈ ಪ್ರಶ್ನೆಗೆ ಮಹತ್ವ ಇದೆ. ಅಜಯ್ ಅವರು ಇದಕ್ಕೆ ಅಡ್ಡಗೋಡೆ ಮೇಲೆ ದೀಪ ಇಡುವಂತೆ ಉತ್ತರ ನೀಡಿದರು: 'ಎಂಟು ತಾಸಿನಲ್ಲಿ ಚಿತ್ರೀಕರಣವನ್ನು ಮುಗಿಸುವುದು ಎಲ್ಲ ನಿರ್ದೇಶಕರಿಗೂ ಸಾಧ್ಯವಾಗಲಿಕ್ಕಿಲ್ಲ. ಚಿತ್ರರಂಗವು ಈಗ ಯಾರು ಯಾರದ್ದೋ ಅನುಕೂಲಕ್ಕೆ ಕೆಲಸ ಮಾಡುತ್ತಿದೆ.'

ಕಾಜೋಲ್ ಕೂಡ ದೀರ್ಘ ಕಾಲದ ನಂತರ ಸಿನಿಮಾದಲ್ಲಿ ಅಭಿನಯಿಸಿದ್ದಾರೆ. ಸಸ್ಪೆನ್ಸ್–ಹಾರರ್ ಥ್ರಿಲ್ಲರ್‌ನ ಚಿತ್ರ ಎನ್ನುವ ಸೂಚನೆಯನ್ನು 'ಮಾ' ಚಿತ್ರದ ಟ್ರೈಲರ್ ನೀಡಿದೆ. ದಟ್ಟ ಕಾಡಿನಲ್ಲಿ ಕಾಜೋಲ್ ಕಾರು ಓಡಿಸಿಕೊಂಡು ಹೋಗುತ್ತಿರುತ್ತಾರೆ. ಕಾರಿನಲ್ಲಿ ಅವರ ಇಬ್ಬರು ಹೆಣ್ಣುಮಕ್ಕಳು ಇರುತ್ತಾರೆ. ಒಬ್ಬಳಿಗೆ ಋತುಚಕ್ರದಿಂದ ರಕ್ತಸ್ರಾವ ಆಗುತ್ತದೆ. 'ಸ್ವಲ್ಪ ಹೊತ್ತು ತಡೆ... ತಲುಪೋಣ' ಎಂದು ಆಕೆಗೆ ತಾಯಿ ಕಾಜೋಲ್ ಹೇಳುತ್ತಾರೆ. ಅಷ್ಟರಲ್ಲಿ ಕಾರಿನ ವಿಂಡ್‌ಶೀಲ್ಡ್ ಮೇಲೆ ಏನೋ ಬಿದ್ದಂತೆ ಭಾಸವಾಗುತ್ತದೆ. 'ಆ ಪ್ರದೇಶದಲ್ಲಿ ಒಂದು ಮರವಿದೆ. ಅದು ಎಷ್ಟೋ ಹೆಣ್ಣುಮಕ್ಕಳನ್ನು ಬಲಿ ತೆಗೆದುಕೊಂಡಿದೆ' ಎಂದು ಪಾತ್ರಧಾರಿಯೊಬ್ಬರು ಬಂದು ಹೇಳುತ್ತಾರೆ. ತಾನು ಅಂತಹ ಯಾವ ಬೆದರಿಕೆಗೂ ಜಗ್ಗುವವಳಲ್ಲ, ತನ್ನ ಮಕ್ಕಳನ್ನು ರಕ್ಷಿಸಿಯೇ ಸಿದ್ಧ ಎಂದು ಕಾಜೋಲ್ ಟೊಂಕಕಟ್ಟಿ ನಿಲ್ಲುತ್ತಾರೆ. ಇವಿಷ್ಟೂ ಟ್ರೈಲರ್‌ನ ದೃಶ್ಯಗಳ ಸಾರ. ವಿಶಾಲ್ ಫುರಿಯಾ ಈ ಸಿನಿಮಾವನ್ನು ನಿರ್ದೇಶಿಸಿದ್ದು, ಜನ ಸ್ವೀಕರಿಸುತ್ತಾರೆ ಎಂಬ ವಿಶ್ವಾಸವಿದೆ ಎಂದು ಕಾಜೋಲ್ ಹೇಳಿದ್ದಾರೆ. ■

# 'ಸ್ಪಿರಿಟ್' ಬೇಡವೆಂದ ದೀಪಿಕಾ



ದೀಪಿಕಾ ಪಡುಕೋಣೆ ಬಹುಭಾಷಾ 'ಸ್ಪಿರಿಟ್' ಸಿನಿಮಾದಲ್ಲಿ ಪ್ರಭಾಸ್ ಅವರಿಗೆ ಜೋಡಿಯಾಗಬೇಕಿತ್ತು. ಆದರೆ, ಅವರು ಆ ಸಿನಿಮಾದಿಂದ ಹೊರನಡೆದರು. ಅವರ ಜಾಗಕ್ಕೆ ತೃಪ್ತಿ ಡಿಮ್ರಿ ಅವರನ್ನು ಆಯ್ಕೆ ಮಾಡಿರುವುದನ್ನು ನಿರ್ದೇಶಕ ಸಂದೀಪ್ ರೆಡ್ಡಿ ವಂಗಾ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಒಂದರ ಮೂಲಕ ಜಾಹೀರುಗೊಳಿಸಿದರು.

ಆ ಪೋಸ್ಟ್‌ನಲ್ಲಿ ದೀಪಿಕಾ ಅವರ ಹೆಸರನ್ನು ಉಲ್ಲೇಖಿಸದೆ, 'ಹಿರಿಯ ನಟಿಯೊಬ್ಬರಿಗೆ ನನ್ನ ಸಿನಿಮಾದಲ್ಲಿ ನಟಿಸುವ ಆಹ್ವಾನ ನೀಡಿದ್ದೆ. ಅವರು ಕಥೆಯನ್ನು ಕೇಳಿದರು. ನಟಿಸಲು ಒಪ್ಪದೆ ಹೊರನಡೆದರು. ಹೊರಗೆ ಸಿನಿಮಾದ ಕಥೆ ಹೇಳಿಕೊಂಡು ಓಡಾಡುತ್ತಿದ್ದಾರೆ. ತಮಗಿಂತ ವಯಸ್ಸಿನಲ್ಲಿ ಚಿಕ್ಕವರಾದವರನ್ನು ಗೌರವಿಸದ, ಕಥೆ ಕೇಳಿದ ನಂತರ ಹೇಳದೇ ಇರುವುದು ನೈತಿಕ ಜವಾಬ್ದಾರಿ ಎಂದು ಭಾವಿಸದ ಅವರದ್ದು ಎಂತಹ ಸ್ತ್ರೀವಾದ' ಎಂಬ ಪ್ರಶ್ನೆಯನ್ನು ಆ ಪೋಸ್ಟ್‌ನಲ್ಲಿ ಸಂದೀಪ್ ಕೇಳಿದ್ದರು.

ದೀಪಿಕಾ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆಯನ್ನು ನೀಡಿರಲಿಲ್ಲ. ಅವರೂ ಫ್ಯಾಷನ್ ಶೋ ಒಂದರಲ್ಲಿ ಭಾಗವಹಿಸಿದ್ದ ಸಂದರ್ಭದಲ್ಲಿ ಯಾರ ಹೆಸರನ್ನೂ ತೆಗೆದುಕೊಳ್ಳದೆ ಪ್ರತಿಕ್ರಿಯೆ ನೀಡಿದರು. ಅದು ಹೀಗಿದೆ: 'ಜನರು ಏನೇನೋ ಒಕ್ಕೊರಲಿನಿಂದ ಹೇಳುತ್ತಾ ಇರುತ್ತಾರೆ. ನಮ್ಮ ಸುತ್ತಲಿನವರೂ ತಮ್ಮ ಮೂಗಿನ ನೇರಕ್ಕೆ ಮಾತನಾಡುತ್ತಿರುತ್ತಾರೆ. ಅಂತಹ ಸಂದರ್ಭಗಳಲ್ಲಿ ನಾವು ಹೃದಯದ ಮಾತು ಕೇಳುವಷ್ಟು ಗಟ್ಟಿಗಿತ್ತಿಯರಾಗಬೇಕು. ಆಗ ಮಾತ್ರ ನಮ್ಮ ಕೆಲಸವನ್ನು ಮಾಡಿಕೊಂಡು ನೆಮ್ಮದಿಯಿಂದ ಇರಲು ಸಾಧ್ಯ. ಇಲ್ಲವಾದರೆ, ಅನಗತ್ಯವಾಗಿ ಮನಸ್ಸಿನಲ್ಲಿ ರಾಡಿ ಮೂಡುತ್ತದೆ. ಯಾರ ಜೊತೆ, ಯಾವ ಸಿನಿಮಾಗಳಲ್ಲಿ, ಯಾವಾಗ ಕೆಲಸ ಮಾಡಬೇಕು ಎನ್ನುವುದನ್ನು ನಾನು ಹೃದಯದ ಮಾತು ಕೇಳಿಯೇ ನಿರ್ಧರಿಸುತ್ತೇನೆ.'

ದೀಪಿಕಾ ಪಡುಕೋಣೆ ಆಡಿರುವ ಈ ಮಾತು ಸಂದೀಪ್ ರೆಡ್ಡಿ ವಂಗಾ ಅವರಿಗೆ ಪರೋಕ್ಷವಾಗಿ ಉತ್ತರ ಕೊಟ್ಟಂತೆ ಇದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಚರ್ಚೆ ನಡೆಯುತ್ತಿದೆ.

ದೀಪಿಕಾ ಮಗುವಿನ ತಾಯಿಯಾದ ನಂತರ ಈ ಸಿನಿಮಾದಲ್ಲಿ ಅಭಿನಯಿಸಲಿದ್ದಾರೆ ಎಂದು ದೀರ್ಘಾವಧಿ ಸುದ್ದಿಯಾಗಿತ್ತು. ಈಗ ಅವರು ಶಾರುಕ್ ಖಾನ್ ಅಭಿನಯದ 'ಕಿಂಗ್' ಚಿತ್ರದಲ್ಲಿ ನಟಿಸುವುದು ನಿಕ್ಕಿಯಾಗಿದೆ. ಅದಲ್ಲದೆ 'ಕಲ್ಕಿ–2' ಚಿತ್ರಕ್ಕೂ ಅವರು ಬಣ್ಣ ಹಚ್ಚಲಿದ್ದಾರೆ. ■